ಶ್ರೀ ಎಚ್. ಗಂಗಾಧರನ್.—ಅಧ್ಯಕ್ಷರೇ, ೩೧-೧-೧೯೭೭ ರಿಂದ ಅಂದರೆ ಕಳೆದ ಆರು ವರ್ಷಗಳಿಂದ ನಿರ್ದೇಶಕರ ಹುದ್ದೆ ಖಾಲಿ ಇದೆ. ಈ ಬಗ್ಗೆ ೬ ವರ್ಷದಿಂದ ಲೋಕ ಸೇವಾ ಆಯೋಗದಿಂದ ಸಲಹೆ ಪಡೆಯುತ್ತಿದ್ದಾರಾ ? ಈ ಬಗ್ಗೆ ಸರ್ಕಾರ ಕೆಲಸ ಮಾಡುತ್ತಿದೆಯೋ ಇಲ್ಲಾ ಕಣ್ಣು ಮುಚ್ಚಿ ಕೊಂಡಿದೆಯೋ ? ಈ ಬಗ್ಗೆ ತಡ ಆಗಿರುವುದು ಏಕೆ ? ಹೋಮಿಯೋಪತಿ ನಿರ್ದೇಶನಾಲಯದಲ್ಲಿ ಮೂರು ಉಪ ನಿರ್ದೇಶಕರ ಹುದ್ದೆಗಳು, ಆಯುರ್ವೇದ ಪ್ರಾಂಶುಪಾಲಕರ ಮೂರು ಹುದ್ದೆಗಳು, ಯುನಾನಿ ಪ್ರಾಂಶುಪಾಲರ ಒಂದು ಹುದ್ದೆ, ನಾಲ್ಕು ಸ್ಥಾಯಿ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಈ ಬಗ್ಗೆ ಸರ್ಕಾರದ ಧೋರಣೆ ಏನು ? ಯುನಾನಿ ವೈದ್ಯ ಮಂಡಲಿ ಚುನಾವಣೆ ಬಗ್ಗೆ ದಾಖಲ್ಮಾಡಲಾಗಿ ಚುನಾವಣೆ ನಡೆಸಲಿಲ್ಲವೆಂದಿದ್ದೀರಿ. ಈ ದಾವೆಯನ್ನು ವಜಾ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆಯೋ ? ವಿದ್ಯಾಲಯದ ವಿಭಾಗದಲ್ಲಿ ಪ್ರಾಂಶುಪಾಲರು—೨, ಪ್ರಾಧ್ಯಾಪಕರು—೯ ಉಪಪ್ರಾಧ್ಯಾಪಕರು—೨೦, ಉಪನ್ಯಾಸಕರು—೩ ಹುದ್ದೆಗಳು, ಆಸ್ಪತ್ರೆ ವಿಭಾಗದಲ್ಲಿ ಸ್ಥಾಯಿ ವೈದ್ಯಾಧಿಕಾರಿಗಳ ಹುದ್ದೆ—೨ ಒಂದನೇ, ಎರಡನೇ ಹಾಗೂ ಮೂರನೇ ದರ್ಜೆ, ವೈದ್ಯಾಧಿಕಾರಿಗಳ ಒಟ್ಟು ೧೩ ಹುದ್ದೆಗಳು ಖಾಲಿ ಇವೆಯೆಂದಿದ್ದೀರಿ. ಮೈಸೂರಿನಲ್ಲಿ ೧೯೭೮ ರಿಂದ ೨ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಪ್ರಾಧ್ಯಾಪಕರುಗಳ ಹುದ್ದೆ ೮ ಬೆಂಗಳೂರು ಮತ್ತು ಮೈಸೂರಿನಲ್ಲಿ ೧೯೭೯ ರಿಂದ ಹಾಗೂ ೧೯೭೮ ರಿಂದ ಖಾಲಿ ಇವೆ. ಉಪ-ಪ್ರಾಧ್ಯಾಪಕರ ಹುದ್ದೆಗಳು ೧೯೭೮ ರಿಂದ ಖಾಲಿ ಇವೆ. ಅಂದರೆ ಕಳೆದ ೨೦-೨೫ ವರ್ಷಗಳಿಂದ ಖಾಲಿ ಇದೆ. ಈ ಬಗ್ಗೆ ಆರೋಗ್ಯ ಮಂತ್ರಿಗಳಿಗೆ ಆರೋಗ್ಯ ಇದೆಯೋ ಗೊತ್ತಿಲ್ಲ. ನಾನು ಈ ಸರ್ಕಾರಕ್ಕೆ ಮಾತ್ರ ಕೇಳುತ್ತಿಲ್ಲ. ಹಿಂದಿನ ಸರ್ಕಾರಗಳಿಗೂ ನಾನು ಈ ಮೂಲಕ ಪ್ರಶ್ನೆ ಕೇಳುತ್ತಿದ್ದೇನೆ. ಹಾಗೂ ಈ ಬಗ್ಗೆ ಹಿಂದಿನಿಂದಲೂ ಕೇಳುತ್ತಿದ್ದೇನೆ. ಹಿಂದೆ ನಾನು ಪ್ರಶ್ನೆ ಕೇಳಿದಾಗ ಆಗಿನ ಮಂತ್ರಿಗಳು ಮಾಡುತ್ತೇವೆ ಮಾಡುತ್ತೇವೆಂದು ಹೇಳುತ್ತಾ ಹೊರಟು ಹೋದರು. ನಾವೂ ನೀವು ಸದಸ್ಯರಾಗಿರುವಾಗಲೇ ಇದನ್ನು ಮಾಡುತ್ತೀರಾ ? ಶೀಘ್ರವಾಗಿ ಈ ಹುದ್ದೆಗಳನ್ನು ತುಂಬುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಸದಸ್ಯರಿಗೆ ಈ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ನಾನು ಈ ಖಾತೆಯನ್ನು ಕೇವಲ ಎರಡು ತಿಂಗಳ ಹಿಂದೆಯಿಂದ ಹೊತ್ತಿದ್ದೇನೆ, ೧೯೭೭ರಿಂದ ಈ ಹುದ್ದೆಗಳನ್ನು ಏಕೆ ತುಂಬಲಿಲ್ಲ ಎನ್ನುವ ಬಗ್ಗೆ ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ. ಈ ಬಗ್ಗೆ ಜನರೇ ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ರಿಟ್ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಆದಷ್ಟು ಜಾಗ್ರತೆ ಮಾತನಾಡಿ ಆ ಬಗ್ಗೆ ಪ್ರಯತ್ನಪಡುತ್ತೇನೆ. ಈಗ ಏನು ಹುದ್ದೆಗಳು ಖಾಲಿ ಇವೆ ಅವೆಲ್ಲಾ ಹಾಗೇ ಖಾಲಿ ಇಲ್ಲ. ಅಲ್ಲಿ ಕೆಲವರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಹಾಗೂ ಖಾಲಿ ಇರುವ ಜಾಗಗಳನ್ನು ತುಂಬುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇನೆ.

ಸಭಾಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಮನವಿಗಳು

(i) ದೈನಂದಿನ ಪತ್ರಿಕೆಯಲ್ಲಿ ಬಂದ ಗಡಿ ವಿವಾದದ ಸುದ್ದಿಯ ಬಗ್ಗೆ

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೇ, ನಾನು ನಿಯಮ ೩೩೪ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಈ ದಿನದ ಕನ್ನಡ ಪ್ರಭ ಪತ್ರಿಕೆಯಲ್ಲಿ "ಗಡೀ ವಿವಾದ ಇತ್ಯರ್ಥಕ್ಕೆ ಪಾಟೀಲ್ ಹೊಸ ಸೂತ್ರ" ಎಂಬ ಶೀರ್ಷಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಒಂದು ಕೆಲಸ ಮಾಡಿದ್ದಾರೆ. ಅವರು ಮತ್ತು ಹೆಗ್ಗಡೆಯವರು ಕೂತು ಈ ಬಗ್ಗೆ ಚರ್ಚೆ ಮಾಡಿ

ಎಷ್ಟು ಬಿಡಬೇಕು, ಎಷ್ಟು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮಾತನಾಡುವ ಬಗ್ಗೆ ಹೇಳಿದ್ದಾರೆ. ಇದು ಬಹಳ ಅಪಾಯಕರವಾದದ್ದು. ೧೯೫೬ರ ನಂತರ ಭಾಷಾವಾರು ಪ್ರಾಂತ್ಯ ರಚನೆ ಆದಮೇಲೆ ೧೨ ವರ್ಷಗಳ ನಂತರ ಮತ್ತೆ ಮಾತುಕತೆ ಪ್ರಾರಂಭವಾಯಿತು. ಆ ೧೨ ವರ್ಷಗಳಲ್ಲಿ ಎಷ್ಟೋ ಕಮಿಟಿಗಳು ಆಗಿ ಮಾತುಕತೆಗಳು ಆಗಿ ಪರಿಹಾರವಾಗಲಿಲ್ಲ, ಹಾಗೂ ಒಂದು ಒಪ್ಪಂದಕ್ಕೆ ಬರಲಿಲ್ಲ. ಆ ದೃಷ್ಟಿಯಿಂದ ಮಹಾಜನ್ ಕಮಿಷನ್ ರಿಪೋರ್ಟ್ ಬಂತು. ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಬಾಂಬೆಗೆ ಹೋಗಿ "ಎಸ್" ಎಂದು ಹೇಳಿಸಿದರು. ಮಹಾಜನ್ ಕಮಿಷನ್ ರಿಪೋರ್ಟ್ ಬಂದಾಗ ನಮ್ಮ ಶಾಸನ ಸಭೆಯಲ್ಲಿ ಜಾರಿಗೆ ತರಬೇಕೆಂದು ಎರಡು ಸಾರಿ...

MR. DEPUTY SPEAKER.—You have given the notice and Chief Minister will make a statement.

ಶ್ರೀ ಭೀಮಣ್ಣ ಖಂಡ್ರೆ.—ಮತ್ತೊಮ್ಮೆ ಇದು ಪ್ರಸ್ತಾಪಕ್ಕೆ ಬಂದರೆ ಫ್ಲಡ್‌ಗೇಟ್ ಓಪನ್ ಮಾಡಿದ ಹಾಗೆ ಆಗುತ್ತದೆ. ಮಹಾಜನ್ ಕಮಿಷನ್ ವರದಿಯೇ ಜಾರಿಗೆ ಬರಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಮತ್ತೊಮ್ಮೆ ಚರ್ಚೆಗೆ ಹೋಗುವುದು ಸರಿಯಲ್ಲ.

೧೨-೩೦ ಪಿ.ಎಂ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ಹೇಳತಕ್ಕಂಥ ವಿಷಯವನ್ನು ಗಮನಸೆಳೆಯುವ ಸೂಚನೆ ರೂಪದಲ್ಲಿ ಕೊಟ್ಟಿದ್ದರೆ ಮುಗಿದಿತು. ತಾವು ಅದನ್ನು ಅಂಗೀಕಾರ ಮಾಡಬಹುದಿತ್ತು. ಶೂನ್ಯವೇಳೆಯನ್ನು ತೆಗೆದು ಹಾಕಿದ್ದರೂ ಅದರ ಅವಕಾಶವನ್ನು ಪಡೆದುಕೊಂಡು ಪ್ರಸ್ತಾಪ ಮಾಡಿದ್ದಾರೆಂದು ಕಾಣುತ್ತದೆ. ನಾನು ಜವಾಬು ಕೊಡುತ್ತೇನೆ. ಮಾನ್ಯ ಖಂಡ್ರೆಯವರಿಗೆ ಈ ವಿಚಾರ ಗೊತ್ತಿಲ್ಲವೆ? ಈ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿರುವಾಗ ಮತ್ತೆ ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೀರಿ? ಇದನ್ನು ಮತ್ತೆ ಹೇಳುವಂಥ ಅಗತ್ಯ ಇಲ್ಲ. ಮಾನ್ಯ ಅಧ್ಯಕ್ಷರೇ ಇದರಲ್ಲಿ ಗಾಬರಿಪಡತಕ್ಕಂಥ ಪ್ರಮೇಯ ಏನೂ ಇಲ್ಲ. ಬೆಳಗಾಂ ಮಹಾರಾಷ್ಟ್ರಕೆ ಹೋಗುವುದಿಲ್ಲ. ಸೊಲ್ಲಾಪುರ ನಮಗೆ ಬರುವುದಿಲ್ಲ. ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಒಂದು ಸಂದರ್ಭದಲ್ಲಿ ಮಾತನಾಡುತ್ತಾ ಕರ್ನಾಟಕದ ಮುಖ್ಯಮಂತ್ರಿಗಳ ಜೊತೆಗೆ ಗಡಿಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದಾರೆ. ಈ ಸದನಕ್ಕೆ ಈ ಒಂದು ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳುವುದಾದರೆ, ಸುಮಾರು ಒಂದೂವರೆ ತಿಂಗಳ ಹಿಂದೆ ನಮಗೆ ಮಹಾರಾಷ್ಟ್ರದಿಂದ ಬರುತ್ತಿದ್ದಂಥ ವಿದ್ಯುಚ್ಛಕ್ತಿ ನಿಂತು ಹೋಯಿತು. ಈ ವಿಚಾರದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡುವುದಕ್ಕೆ ಹೋದ ಸಂದರ್ಭದಲ್ಲಿ ನನ್ನ ಜೊತೆಗೆ ಬೊಮ್ಮಾಯಿಯವರು ಬಂದಿದ್ದರು, ಆ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಭೋಸ್ಲೆಯವರು ಗಡಿ ವಿಚಾರದಲ್ಲಿ ಇತ್ಯರ್ಥಕ್ಕೆ ಬರೋಣವೆಂದು ಹೇಳಿದ್ದರು. ಇತ್ಯರ್ಥಕ್ಕೆ ಬರುವುದಕ್ಕೆ ನಮ್ಮ ವಿರೋಧ ಇಲ್ಲ ಆದರೆ ಯಾವುದೇ ರೀತಿಯಲ್ಲಿ ಇತ್ಯರ್ಥಕ್ಕೆ ಬರಬೇಕಾದರೂ ಮಹಾಜನ್ ಕಮೀಷನ್ ಚೌಕಟ್ಟಿನೊಳಗೆ ಬರಬೇಕೆಂದು ತಿಳಿಸಿದ್ದೆವು. ಅದಕ್ಕೆ ಅವರು ಏನೂ ಹೇಳಲಿಲ್ಲ. ಈ ವಿಷಯದ ಬಗ್ಗೆ ಪತ್ರವನ್ನು ಕೂಡ ಬರೆದಿದ್ದಾರೆ. ಮಾತುಕತೆ ಆಡುವುದರಿಂದ ಕೆಟ್ಟು ಹೋಗುತ್ತದೆಯೆ?

ಶ್ರೀ ಭೀಮಣ್ಣ ಖಂಡ್ರೆ.—ಹೌದು.

ಶ್ರೀ ರಾಮಕೃಷ್ಣ ಹೆಗಡೆ.—ಹೇಗೆ ಕೆಡುತ್ತದೆ? ಅವರ ಅಭಿಪ್ರಾಯ ಬದಲಾವಣೆಯಾಗಿರಬಹುದು. ಮಹಾಜನ್ ಕಮೀಷನ್ ವರದಿಯನ್ನು ತಳ್ಳಿ ಹಾಕಿಲ್ಲ, ಸ್ವಲ್ಪಮಟ್ಟಿಗೆ ಕೊಟ್ಟು ತೆಗೆದುಕೊಂಡು ಬಗೆಹರಿಸುವುದಕ್ಕೆ ಸಾಧ್ಯವೇ ಅಂತ ಹೇಳುತ್ತಾರೆ. ಇದನ್ನು ನಾವು ತಿರಸ್ಕರಿಸಬಹುದೆ? ಈ ಸಂದರ್ಭದಲ್ಲಿ ಈ ಸದನಕ್ಕೆ ಸ್ಪಷ್ಟ ಮಾಡುವುದಕ್ಕೆ ಬಯಸುತ್ತೇನೆ. ನಾವು ಮಾತನಾಡುವುದಕ್ಕೆ ಸಿದ್ಧರಿದ್ದೇವೆ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ನನ್ನ ವಿಚಾರದಲ್ಲಿ ಸಂದೇಹಪಡುವುದು ಬೇಡ. ಅನೇಕ ಜನ ಹಿರಿಯ ಸದಸ್ಯರುಗಳಿಗೆ ಗಡಿ ವಿಚಾರದಲ್ಲಿ ೧೫-೨೦ ವರ್ಷಗಳ ಹಿಂದೆ ನಾನು ಏನು ಮಾಡಿದ್ದೇನೆ ಎನ್ನುವುದು ಗೊತ್ತಿದೆ. ನಮ್ಮ ಕೈಯಲ್ಲಿ ಕರ್ನಾಟಕದ ಹಿತ ಗಡಿ ವಿಚಾರದಲ್ಲಿ ಸುರಕ್ಷಿತವಾಗಿರುವುದಿಲ್ಲ ಎಂದು ಯಾರಾದರೂ ತಿಳಿದುಕೊಂಡರೆ ಅದಕ್ಕಂಥ ಭ್ರಮೆ ಬೇರೆ ಇಲ್ಲ

ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಸಹಕಾರ ಅವರಿಗೆ ಬೇಕು. ಅವರ ಸಹಕಾರ ನಮಗೆ ಬೇಕಾಗುತ್ತದೆ. ಮಾತು ಕತೆ ನಡೆಸುವುದಕ್ಕೆ ಬರುವುದಿಲ್ಲವೆಂದು ಮೊಂಡುತನ ಮಾಡಬಾರದು.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ......

ಉಪಾಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಗಡಿ ವಿಚಾರದಲ್ಲಿ ಉತ್ತರ ಹೇಳಿದ್ದಾರೆ. ಅದನ್ನು ಮತ್ತೆ ಕೇಳುವುದು ಬೇಡ.

ಶ್ರೀ ಭೀಮಣ್ಣ ಖಂಡ್ರೆ —ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷರು.—ತಾವು ಸರ್ಕಾರದ ಗಮನ ಸೆಳೆದಿದ್ದೀರಿ. ಸರ್ಕಾರದವರು ಸೂಕ್ತವಾಗಿ ಉತ್ತರಿಸಿದ್ದಾರೆ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.—ಮಹಾಜನ್ ವರದಿಯನ್ನು ನಾವು ಒಪ್ಪಿದ್ದೇವೆ......

ಉಪಾಧ್ಯಕ್ಷರು.—ಎಲ್ಲಾ ಮುಗಿಯಿತು. ತಾವು ಮತ್ತೆ ಮತ್ತೆ, ನನ್ನ ಅಪ್ಪಣೆ ಇಲ್ಲದೆ ಮಾತನಾಡಿದರೆ ಅದು ದಾಖಲೆಯಲ್ಲಿ ಹೋಗುವುದಿಲ್ಲ.

(ii) ದಕ್ಷಿಣ ವಲಯದ ಮುಖ್ಯ ಮಂತ್ರಿಗಳ ಸಭೆ ನಡೆದ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ದಿವಸ ಚರಿತ್ರಾರ್ಹವಾದಒಂದು ಸಭೆಯಲ್ಲಿ ಭಾಗವಹಿಸಿದ್ದರು. ಅದು ಪತ್ರಿಕೆಯಲ್ಲಿ ಕೂಡ ಬಂದಿದೆ ದಕ್ಷಿಣ ವಲಯ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದ್ದಂಥ ಸಭೆ ಅದು. ತಮಿಳುನಾಡು ಆಂಧ್ರಪ್ರದೇಶ ಮತ್ತು ಪಾಂಡಿಚೇರಿ ಹಾಗೂ ಕರ್ನಾಟಕದ ಮುಖ್ಯಮಂತ್ರಿಗಳು ಆ ಸಭೆಯಲ್ಲಿ ಭಾಗವಹಿಸಿ ಮಹತ್ತರವಾದ ಅಂಶಗಳನ್ನು ಚರ್ಚೆ ಮಾಡಿದ್ದಾರೆ. ಕೇಂದ್ರ ರಾಜ್ಯಗಳಿಗೆ ಇರತಕ್ಕಂಥ ಸಂಬಂಧ ಹಾಗೂ ಅದರಲ್ಲಿ ರಾಜ್ಯಗಳಿಗೆ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಡಬೇಕೆನ್ನುವ ವಿಷಯದಲ್ಲಿ ತಮ್ಮ ಹಕ್ಕುಗಳ ಬಗ್ಗೆಯೂ ಮಾತನಾಡಿದ್ದಾರೆ. ಜೊತೆಗೆ ವಿತ್ತೀಯ ಆಯೋಗದವರಿಗೆ ದಕ್ಷಿಣ ವಲಯ ರಾಜ್ಯಗಳಿಗೆ ಸಂಬಂಧಪಟ್ಟಂತೆ ಏಕರೂಪವಾದ ಬೇಡಿಕೆಯನ್ನು ಇಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇಂಥ ಸಭೆಗಳು ಆಗಿಂದಾಗ್ಗೆ ನಡೆಯಬೇಕೆಂಬ ಇಚ್ಛೆಯನ್ನು ವ್ಯಕ್ತ ಮಾಡಿದ್ದಾರೆ. ಈ ಸಭೆಯನ್ನು ಕರೆಯುವ ಮುನ್ನ ಈ ಮನೆಯ ವಿಶ್ವಾಸವನ್ನು ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು ಎಂದು ನನ್ನ ಅನಿಸಿಕೆ. ಮಾನ್ಯ ಮುಖ್ಯಮಂತ್ರಿಯವರಿಗೆ ಕಾಲಾವಕಾಶ ಇಲ್ಲದೇ ಇತ್ತು ಎಂದು ಕಾಣುತ್ತದೆ. ಆದರೂ ಸಭೆಯಲ್ಲಿ ನಡೆದ ಪೂರ್ಣ ವಿವರಗಳನ್ನು ಈ ಮನೆಗೆ ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಪ್ರಸ್ತಾಪ ಮಾಡಿದ ವಿಷಯವನ್ನು ನಾನು ಕೂಡ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಭಾಷಣದಲ್ಲಿ ಕೆಲವೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ನಡೆದಂಥ ಸಭೆಯಲ್ಲೂ ಕೂಡ ಕೆಲವೊಂದು ನಿರ್ಣಯಗಳನ್ನು ಮಾಡಿದ್ದಾರೆ. ರಾಜ್ಯಕ್ಕೆ ಕೇಂದ್ರದಿಂದ ಬರತಕ್ಕಂಥ ಆರ್ಥಿಕ ನೆರವು ಪಡೆಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯ ಇಲ್ಲ ರಾಜ್ಯಕ್ಕೆ ಬರಬೇಕಾದ ಅನುಕೂಲಗಳನ್ನು ಪಡೆಯುವ ವಿಚಾರದಲ್ಲಿ ನಾವು ಕೂಡ ಸಹಕರಿಸುವುದಕ್ಕೆ ಸಿದ್ಧರಿದ್ದೇವೆ. ಬಹಳ ಮಟ್ಟಿಗೆ ಇಂಥ ಸಭೆ ಸೇರುವುದಕ್ಕೆ ಮುನ್ನ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ತಮ್ಮ ನಂಬಿಕೆಗೆ ತೆಗೆದುಕೊಂಡಿದ್ದರೆ ಚನ್ನಾಗಿತ್ತು ಎಂದು ನನಗನ್ನಿಸುತ್ತದೆ. ರಾಜ್ಯಾಂಗದಲ್ಲಿ ದಕ್ಷಿಣ ವಲಯಗಳ ಮುಖ್ಯಮಂತ್ರಿಗಳ ಸಭೆ ನಡೆಸುವುದಕ್ಕೆ ಅವಕಾಶ ಇದೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮುಂತುವರ್ಜಿ ತೆಗೆದುಕೊಂಡು ಸಭೆ ನಡೆಸಿದ್ದಾರೆ. ಇದರ ಬಗ್ಗೆ ನಾನು ವಿರೋಧ ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. ನಡೆಸಿದಂಥ ಸಭೆಯಲ್ಲಿ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ಚರ್ಚೆ ಮಾಡುವಂಥ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಚೆನ್ನಾಗಿತ್ತೆಂದು ನನ್ನ ಅಭಿಪ್ರಾಯ.